KACM010021832019

Presented on : 27-09-2019
Registered on : 27-09-2019
Decided on : --
Duration :

**IN THE COURT OF**
**ADDL. DISTRICT SESSIONS JUDGE.CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SPL.C/117/2019**

**Exhibit No.**

Complainant(PROSECUTION):
State by Mudigere Police, Rep. by Public Prosecutor, CKM
Through Police Station Officer MUDIGERE PS
58 , State by Mudigere Police, Rep. by Public Prosecutor, CKM
ChikmagalurCHIKMAGALUR

State by Mudigere Police, Rep. by Public Prosecutor, CKM

**VERSUS**

Accused:
Chethan H.C. @ Chethan Poojari S/o Chandra Poojari, 24 yrs. labour R/o Halekote, Bidrahalli, Mudige
Age: 24
Occupation :
Chethan H.C. @ Chethan Poojari S/o Chandra Poojari, 24 yrs. labour R/o Halekote, Bidrahalli, Mudigere Taluk.

2:Jeevan Kumar A.N. @ Jeevan S/o Narayana
Age 29 yrs. Labour
R/o halekote
Bidrahali
Mudigere
Age: 30
Occupation :

S/o Narayana
Age 29 yrs. Labour
R/o halekote
Bidrahali
Mudigere

3:Vijay Kumar @ vijay @ Kumar S/o Srinivasanaik
30 yrs. labour
R/o Halekote
Bidrahalli
Mudigere
Age: 30
Occupation :
R/o Halekote
Bidrahalli
Mudigere Taluk

4:Dinesh H.S. S/o Subramanya
22 yrs. Labour
R/o Halekote
Bidrahalli
Mudigere
Age: 22
Occupation :
R/o Halekote
Bidrahalli
Mudigere

5:Ganesh H.s. S/o subramanya
25 yrs. Labour
R/o Halekote
Bidrahalli
Mudigere
Age: 25
Occupation :
R/o Halekote
Bidrahalli
Mudigere

6:Madhu @ Vishwanath S/o srinivasanaik
35 yrs. labour
R/o Halekote
Bidrahalli
Mudigere
Age: 35

Occupation :
R/o Halekote
Bidrahalli
Mudigere

7:Vijendra H.S. @ Vijayendra H.S. S/o Srinivasanaika
26 yrs. labour
R/o Halekote
Bidrahalli
Mudige
Age: 0
Occupation :
R/o Halekote
Bidrahalli
Mudigere

8:Chandru Poojari @ Chandru @ Poojari
S/o Jarappa poojari
52 yrs. labour
R/o Halekote
Bidrahalli

Age: 52
Occupation :
R/o Halekote
Bidrahalli
Mudigere

9:Krishna S/o Swamy
50 yrs
labourer
R/o Halekote
Bidrahalli
Mudigere
Age: 50
Occupation :
R/o Halekote
Bidrahalli
Mudigere

10:Sankesh J.M. S/o Manjunath
21 yrs. labour
R/o Halekote
Bidrahalli
Mudigere

Age: 21
Occupation :
R/o Halekote
Bidrahalli
Mudigere

11:Kiran H.M. S/o Manjunatha
23 yrs. labour
R/o Halekote
Bidrahalli
Mudigere
Age: 23
Occupation :
R/o Halekote
Bidrahalli
Mudigere

12:Naveen B.S. S/o Somashekarappa
25 yrs. Labour
R/o Bettagere
Banakal
Mudigere
Age: 25
Occupation :
R/o Bettagere
Banakal
Mudigere

13:Prabhakar B.S. s/o Swaminatha
42 yrs. Driver
R/o Nelihudikere V. Kushalnagar
Somvarpete
Kodagu
Age: 42
Occupation :
R/o Nelihudikere V. Kushalnagar
Somvarpete
Kodagu

14:Praveena @ rajesh S/o Ananda Poojari
24 yrs. Photographer
R/o Bettagere
Banakal
Mudigere
Age: 24

Occupation :
R/o Bettagere
Banakal
Mudigere

15:Vinay C. S/o Raju @ Laxmi Raju
30 yrs. Labour
R/o Halekote V. Bidarahalli
Mudigere
Age: 30
Occupation :
R/o Halekote V. Bidarahalli
Mudiger

---

APP for State Complainant}: The Public Prosecutor, Chikmagalur.,
Advocate for H.M. SUDHAKAR appearing for Chethan H.C. @ Chethan Poojari S/o Chandra Poojari, 24 yrs. labour R/o Halekote, Bidrahalli, Mudige Advocate ,

---

**Offence punishable under :**
**143,144,147,148,342,324,323,504,506R/w 149. of INDIAN PENAL CODE, 3(1)(r)(s),3(2)(va). of SC and ST (Prevention of Attrocities)Act,1989,**

## *1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**ಸ್ಪೆಷಲ್ ಮೊಕದ್ದಮೆ ಸಂಖ್ಯೆ: *117/2019***

| | | | |
|---|---|---|---|
| ಸಾಕ್ಷಿದಾರರ ಹೆಸರು | : ಸಂತೋಷ | ಪಿ.ಡಬ್ಲ್ಯೂ. | *1* |
| ತಂದೆಯ ಹೆಸರು | : ಶಾಂತಪ್ಪ | ಸಿ.ಡಬ್ಲ್ಯೂ. | *1* |
| ವಯಸ್ಸು | : *27* ವರ್ಷ | | |
| ಉದ್ಯೋಗ | : ಗಾರೆ ಕೆಲಸ | | |
| ವಾಸಸ್ಥಳ | : ಹಳೇಕೋಟೆ, ಮೂಡಿಗೆರೆ ತಾಃ | | |

ದಿಃ *25-10-2021* ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನನಗೆ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ಹಾಗೂ ಗೈರು ಹಾಜರು ಇರುವ ಆರೋಪಿತರ ಪರಿಚಯ ಇದೆ. *(1* ರಿಂದ *9, 11, 12, 14* ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ಗೈರು ಹಾಜರಿದ್ದು ಅವರನ್ನು ಗುರುತಿಸಿಕೊಳ್ಳಲು ತಕರಾರು ಇಲ್ಲ ಎಂದು ಅವರ ಪರ ವಕೀಲರು ತಿಳಿಸಿರುತ್ತಾರೆ). ಚಾಸಾ.*4* ನನ್ನ ಅತ್ತೆ. ನನಗೆ ಚಾಸಾ.*2, 3, 5* ರಿಂದ *9* ರವರು ನಮ್ಮ ಊರು ಮನೆಯವರಾಗಿದ್ದು, ಅವರ ಪರಿಚಯ ಇದೆ. ನಾನು ಹಸಲರು ಜಾತಿಗೆ ಸೇರಿದ್ದು, ಪರಿಶಿಷ್ಟ ಪಂಗಡಕ್ಕೆ ಸೇರಿರುತ್ತೇನೆ. ಆರೋಪಿತರು ಮಳಿಯಾಳಿ, ಒಕ್ಕಲಿಗರು, ಇತರೆ ಜಾತಿಗೆ ಸೇರಿರುತ್ತಾರೆ.

2. ದಿಃ *24-05-2019* ರಂದು ಸಂಜೆ *7.45* ಗಂಟೆಗೆ ನನ್ನ ಮದುವೆಯ ಲಗ್ನಪತ್ರಿಕೆ ಹಂಚಲು ಚಾಸಾ.*4* ರವರ ಮನೆಗೆ ಹೋಗಿದ್ದೆ. ಆಗ ಎಲ್ಲಾ ಆರೋಪಿತರು

ಚಾಸಾ.4 ರವರಿಗೆ ಸೂಳೆಮುಂಡೆ, ಬೇವರ್ಸಿ ಮನೆಯಿಂದ ಹೊರಗೆ ಬಾ ಎಂದು ಬೈಯುತ್ತಿದ್ದರು. ಆ ರೀತಿ ಬೈಯುತ್ತಿದ್ದನ್ನು ನಾನು ನನ್ನ ಮೊಬೈಲ್ ನಲ್ಲಿ ರೆಕಾರ್ಡ್ ಮಾಡುತ್ತಿದ್ದೆ. ಆಗ ಆರೋಪಿ ವಿಜಯ ರೆಕಾರ್ಡ್ ಮಾಡಬೇಡ ಎಂದು ನನ್ನ ಮೊಬೈಲ್ ನ್ನು ಕಿತ್ತುಕೊಳ್ಳಲು ಬಂದಾಗ ನಾನು ಓಡಿ ಹೋದೆ. ಆಗ 2ನೇ ಆರೋಪಿ ಜೀವನ್ ಹಿಂದಿನಿಂದ ನನಗೆ ಒದ್ದಾಗ ನಾನು ಕೆಳಗೆ ಬಿದ್ದೆ. ಆಗ 4ನೇ ಆರೋಪಿ ನನ್ನ ಬಲಗಾಲಿಗೆ ದೊಣ್ಣೆಯಿಂದ ಹೊಡೆದನು. 1ನೇ ಆರೋಪಿ ಕತ್ತಿಯಿಂದ ನನ್ನ ಬಲಕೈಗೆ ಹೊಡೆದ. ನಾನು ಕೆಳಗೆ ಬಿದ್ದಾಗ ಎಲ್ಲಾ ಆರೋಪಿತರು ಕಾಲಿನಿಂದ ಒದ್ದರು. ಅಲ್ಲದೇ ಆರೋಪಿತರು ನನಗೆ "ಸೂಳೇಮಗನೇ ನೀನು ಘಟ್ಟದವರು ಹಸಲರು, ಜಾತಿನ ಕೇಯ ನಿನ್ನನ್ನು ಜೀವ ಸಹಿತ  ಬಿಡುವುದಿಲ್ಲ" ಎಂದು ಬೆದರಿಕೆ ಹಾಕಿದರು. ಜಗಳವನ್ನು ಚಾಸಾ.2, 3, 5 ರಿಂದ 9 ರವರು ಬಿಡಿಸಿದರು. ನಂತರ ಚಾಸಾ.9 ರವರಿಗೆ ಸೇರಿದ ಆಟೋದಲ್ಲಿ ಚಾಸಾ.5 ರಿಂದ 7 ರವರು ನನ್ನನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಚಾಸಾ.4 ರವರಿಗೆ ಅವಾಚ್ಯವಾಗಿ ಬೈಯುತ್ತಿದ್ದನ್ನು ನಾನು ವಿಡಿಯೋ ಮಾಡಿದ್ದಕ್ಕೆ ಆರೋಪಿತರು ನನಗೆ ಹಲ್ಲೆ ಮಾಡಿರುತ್ತಾರೆ.

3. ಸದರಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆಯುವಾಗ ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ. ಈಗ ನೋಡುತ್ತಿರುವ ದೂರಿನಲ್ಲಿ ನನ್ನ ಸಹಿ ಇರುತ್ತದೆ. ಸದರಿ ದೂರನ್ನು ನಿಶಾನೆ ಪಿ.1 ಎಂದು ಮತ್ತು ಅದರ ಮೇಲೆ ಸಾಕ್ಷಿ ಗುರುತು ಹಿಡಿದ ತಮ್ಮ ಸಹಿಯನ್ನು ನಿಶಾನೆ ಪಿ.1(ಎ) ಎಂದು ಗುರುತಿಸಲಾಯಿತು.

4. ದೂರು ಕೊಟ್ಟ ನಂತರ ದಿಃ 25-05-2019 ರಂದು ಪೊಲೀಸರು ತನಿಖೆಗೆ

ಬಂದಾಗ ನಾನು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಚಾಸಾ.2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 11.30 ರಿಂದ ಮಧ್ಯಾಹ್ನ 1 ಗಂಟೆಯ ತನಕ ಮಹಜರ ಕ್ರಮ ಜರುಗಿಸಿರುತ್ತಾರೆ. ಸದರಿ ಮಹಜರ ಜರುಗಿಸಿದಾಗ ನಾವುಗಳು ರುಜು ಮಾಡಿರುತ್ತೇವೆ. ಈಗ ನೋಡುತ್ತಿರುವ ಮಹಜರಿನಲ್ಲಿ ನನ್ನ ಸಹಿ ಇರುತ್ತದೆ. ಸದರಿ ಮಹಜರನ್ನು ನಿಶಾನೆ ಪಿ.2 ಎಂದು ಮತ್ತು ಅದರ ಮೇಲೆ ಸಾಕ್ಷಿ ಗುರುತು ಹಿಡಿದ ತಮ್ಮ ಸಹಿಯನ್ನು ನಿಶಾನೆ ಪಿ.2(ಎ) ಎಂದು ಗುರುತಿಸಲಾಯಿತು. ಮಹಜರ ಮಾಡುವ ಕಾಲಕ್ಕೆ ಪೊಲೀಸರು ದೊಣ್ಣೆಯನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ಸದರಿ ದೊಣ್ಣೆಯನ್ನು ಈಗ ನ್ಯಾಯಾಲಯದ ಮುಂದೆ ಇದ್ದು, ಅದನ್ನು ಮು.ಮಾ.1 ಎಂದು ಹಾಗೂ ಅದರ ಮೇಲಿರುವ ಸಹಿಯನ್ನು ಮು.ಮಾ.1(ಎ) ಎಂದು ಗುರುತಿಸಲಾಯಿತು. ಮಹಜರ ಕಾಲದಲ್ಲಿ ಪೊಲೀಸರು ಸ್ಥಳದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ನಿಶಾನೆ ಪಿ.3 ಮತುತ ಪಿ.4 ಎಂದು ಗುರುತಿಸಲಾಯಿತು. ನಿಶಾನೆ ಪಿ.3 ರಲ್ಲಿ ನನ್ನ, ಚಾಸಾ.2 ಮತ್ತು 3 ರವರ ಇರುವಿಕೆ ಕಂಡು ಬರುತ್ತದೆ. ನಿಶಾನೆ ಪಿ.4 ರಲ್ಲಿ ನನ್ನ ಬಲಗಾಲಿನ ತೊಡೆಯ ಫೋಟೋ ಇರುತ್ತದೆ. ನಾನು ಈ ಪ್ರಕರಣದಲ್ಲಿ ಪೊಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ದೂರಿಗೆ ಭಾಗಶಃ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

5. ನಾನು ಮೊಬೈಲ್ ನಲ್ಲಿ ರೆಕಾರ್ಡ್ ಮಾಡುವಾಗ *1* ಮತ್ತು *5* ನೇ ಆರೋಪಿತರು ನನಗೆ ಸೂಳೆಮಗನೇ ರೆಕಾರ್ಡ್ ಮಾಡುತ್ತೀಯಾ ಎಂದು ಬೈದರು ಎಂದು ನಿಶಾನೆ ಪಿ.*1* ರಲ್ಲಿ ಹೇಳಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಹೆಚ್.ಎಂ.ಎಸ್. ವಕೀಲರಿಂದಃ

(ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ರೂ.*300*/- ಖರ್ಚಿನ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-

(ಬಿ.ಪುಷ್ಪಾಂಜಲಿ)

*1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ರೂ.

Visit **ecourts.gov.in** for updates or download mobile app "**eCourts Services**" from Android or iOS